ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ಕತ್ತೆಗಳು ಸಹ ಚುನಾವಣೆಯಲ್ಲಿ ನಿಂತು ಗೆಲ್ಲಬಹುದು ಎಂದು ಇಲ್ಲೊಬ್ಬ ರಾಜಕಾರಣಿ ಹೇಳಿದ್ದಾರಲ್ಲಾ...?*



ಸ್ವಾನುಭವ!

ಎಚ್.ಆರ್. ದೇಸಾಯಿ, ರಾಯಚೂರು
*ಕತ್ತೆಗಳನ್ನು ಕುದುರೆಗಳನ್ನಾಗಿ ಮಾಡುವ ಶಕ್ತಿ ವಿದ್ಯೆಗೆ ಇದೆಯಂತೆ. ಆದರೂ ಇಂದೂ ಇನ್ನೂ ಏಕೆ ಕತ್ತೆಗಳು ಕಾಣುತ್ತಿವೆಯಲ್ಲ?*
ಕತ್ತೆಗಳು ಪುಸ್ತಕಗಳನ್ನು ಓದಿ ಜೀರ್ಣಿಸಿಕೊಳ್ಳದೆ ತಿಂದು ಜೀರ್ಣಿಸಿಕೊಳ್ಳುತ್ತಿರುವುದರಿಂದ!

ಮುಕುಂದ ಹೆರಕಲ್ಲ, ಕಲಬುರಗಿ
*ಪ್ರಪಂಚದಲ್ಲಿ ಮೊದಲ ಸುಳ್ಳು ಹೇಳಿದವರು ಯಾರು?*
ಜಗತ್ತಿನಲ್ಲಿ ಹುಟ್ಟಿದ ಮೂರನೆಯ ಮಗುವಿಗೆ ಊಟ ಮಾಡಿಸುವಾಗ ಕಥೆ ಕಟ್ಟಿ ಹೇಳಿದ ಮೊಟ್ಟಮೊದಲ ಅಮ್ಮ.

ಆರ್.ಸಿ. ಪರಶುರಾಮ್, ಶಿಕಾರಿಪುರ
*ಸತ್ತವನನ್ನು ಭೂಮಿಯಲ್ಲೇ ಸಮಾಧಿ ಮಾಡಿದರೂ ಮೇಲಕ್ಕೆ ಹೋಗ್ಬಿಟ್ಟ ಅಂತಾರಲ್ಲಾ, ಯಾಕೆ?*



ಸರಿಯೇ; ಶವ ಎಲ್ಲೇ ಹೋಗಲಿ, ಫೋಟೋ ಗೋಡೆಯ ಮೇಲಕ್ಕೆ ಹೋಗಿರುತ್ತದಲ್ಲ!

ಬಸವಣ್ಣ ಹೊನಖಾಂಡೆ, ಬಸವನಬಾಗೇವಾಡಿ
ದಂಪತಿ – ಪ್ರೀತಿ = ?
ಸಂಸಾರ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಡಾ. ರಾಜ್‌ಕುಮಾರ್‌ರಂತೆ ಪೌರಾಣಿಕ ಪಾತ್ರ ನಿರ್ವಹಿಸುವವರು ಈಗ ಕನ್ನಡದಲ್ಲಿ ಯಾರಿದ್ದಾರೆ?*
ಎವರೆಸ್ಟ್‌ನಂತಹ ಮತ್ತೊಂದು ಶಿಖರ ಎಲ್ಲಿದೆ ಎಂದು ಕೇಳಿದಂತಾಯಿತು. ಸಾಗರಕ್ಕೆ ಸಾಗರ ಮಾತ್ರವೇ ಹೋಲಿಕೆ.

ಎಂ.ಜಿ. ಚನ್ನಪ್ಪಸ್ವಾಮಿ, ಭದ್ರಾವತಿ
*ಯಾರನ್ನೋ ಕರೆಯಲು ಶೀಟಿ ಹೊಡೆದರೆ ಹುಡುಗಿ ತಿರುಗಿನೋಡುತ್ತಾಳಲ್ಲಾ...?*
ಕುಕ್ಕರ್‌ನಂತೆ ಬಡಿದುಕೊಳ್ಳದೆ ಕುಕ್ಕರಬಡಿ ಎಂದು ಹೇಳಲಂತೆ!

ಹೇಮಾವತಿ ಜೈನ್, ಹೂವಿನಹಡಗಲಿ
*ಸ್ನೇಹಿತರು ಹೇಗೆ 'ಆಭರಣಗಳು' ಆಗುತ್ತಾರೆ ಸಾರ್?*
ನಿಮಗೆ ಹಣ ಬೇಕಾದಾಗ ಆಭರಣಗಳಂತೆಯೇ ಅವರೂ ಷೂರಿಟಿ ಆಗುವ ಮೂಲಕ.

ನೇ.ಗೋ.ಭ. ಕುಕ್ಕೆ ಸುಬ್ರಹ್ಮಣ್ಯ
*ವ್ಯಕ್ತಿ ತಾನು ಜ್ಞಾನಿ ಎಂದು ತಿಳಿದುಕೊಂಡರೆ ಮೂರ್ಖನಂತೆ. ಹಾಗಾದರೆ ಇವೆರಡರಲ್ಲಿ ನೀವು ಯಾವುದು ರಾಂಜೀ?*
ತನ್ನಂತೆ ಪರರ ಬಗೆಯುವ ಜ್ಞಾನಿ!

ನ ಖಾತೆ ಆನಂದರಾವ್, ಬೆಂಗಳೂರು
*ಯಾರನ್ನೂ ಕೇಳಬಾರದ ಪ್ರಶ್ನೆ ಯಾವುದು ಹೇಳಿ?*
ನಿಮ್ಮ ವಂಶವೃಕ್ಷದಲ್ಲಿ ಇರುವವರೆಲ್ಲ ಅಯೋಗ್ಯರೇ ಅಂತೆ; ಹೌದಾ?

ಬಿ.ಆರ್ ಸುರೇಶ, ಶಿವಮೊಗ್ಗ
*ನಮ್ಮ ದೇಶ ರಾಮರಾಜ್ಯವಾಗುತ್ತದೆ ಎಂದು ಬಹಳ ವರ್ಷಗಳಿಂದ ಕನಸು ಕಾಣುತ್ತಿದ್ದೇನೆ. ಅದು ನಿಜವಾಗಬಹುದೆ?*
ಉನ್ನತಗುಣಗಳುಳ್ಳ ಹೆಣ್ಣಿನ ಚಾರಿತ್ರ್ಯವಧೆ ಮಾಡುವ ವಿಷಯದಲ್ಲಂತೂ ಈಗಲೇ ಆಗಿದೆಯಲ್ಲಾ!

ಲ್ಯಾಂಡ್ ಬ್ಯಾಂಕ್ ಡಿ.ಚಂದ್ರಕುಮಾರ್, ಮೈಸೂರು
*ಕಸದಿಂದ ರಸ ತೆಗೆಯುವುದು ಎಂದರೇನು?*
ಕಸ ವಿಲೇವಾರಿ ಗುತ್ತಿಗೆಯಲ್ಲಿ ಲಂಚ ಹೊಡೆಯುವುದು!

ಮಹಾವೀರ ಕಾಸರ, ಶಿವಮೊಗ್ಗ
*ಹೆಂಗಸರು ಮನೆಕೆಲಸದಾಕೆ ಸುಂದರವಾಗಿದ್ದರೆ ಇಷ್ಟಪಡುವುದಿಲ್ಲವಲ್ಲ?*
ಅದು ಹೆಂಗಸರು ತಮ್ಮ ಗಂಡಂದಿರ ಕಲ್ಯಾಣಗುಣಕ್ಕೆ ಕೊಡುವ ಸರ್ಟಿಫಿಕೇಟ್!

## ಬಹುಮಾನಿತ ಪ್ರಶ್ನೆ

ವಿ.ಎಸ್. ಹಿಂದೂಪುರ, ಬಳ್ಳಾರಿ
ಈ ಜಗತ್ತಿನಲ್ಲಿ ಸಾವು ಎನ್ನುವುದು ಇಲ್ಲದಿದ್ದರೆ ಏನಾಗಬಹುದು?
ಸ್ಮಶಾನಗಳೂ ಡಿನೋಟಿಫೈ ಆಗಿ ಲೇಔಟ್‌ಗಳಾಗಬಹುದು.

ಎನ್.ವಿ. ಶ್ರೀನಿವಾಸ್, ಮೈಸೂರು
*ಪಾಂಡವರು ಹಾಗೂ ಕೌರವರು ಒಂದು ವೇಳೆ ನಿಮ್ಮ ಸಹಾಯ ಯಾಚಿಸಿದ್ದರೆ ನೀವು ಯಾರಿಗೆ ಒಲಿಯುತ್ತಿದ್ದಿರಿ?*
ಆ ಮಟ್ಟದ ಶಕ್ತಿ ನನಗಿದ್ದಿದ್ದರೆ ಧೃತರಾಷ್ಟ್ರನಿಗೆ ಕಣ್ಣು ಬರಿಸಿ, ಚಿರಂಜೀವತ್ವ ನೀಡಿ, ಅವನನ್ನೇ ರಾಜನಾಗಿಸಿ, ಕುರುಕ್ಷೇತ್ರ ತಪ್ಪಿಸುತ್ತಿದ್ದೆ!

ಪೇಂಟರ್ ಪಾಪು, ಸಂತೇಮರಹಳ್ಳಿ
*ಕಂಡವರ ಮನೆಯ ಕಿಟಕಿಯಲ್ಲಿ ಬಗ್ಗಿ ನೋಡುವ ಚಾಳಿ ನಮಗೇಕೆ ಅಂಟಿಕೊಂಡಿದೆ?*
ಓ! ಕ್ಷಮಿಸಿ; ನೀವು ಸ್ಟಿಂಗ್ ಆಪರೇಷನ್ ಮಾಡುವ ಟಿವಿ ಪಡೆಯವರೆಂದು ನನಗೆ ತಿಳಿದಿರಲಿಲ್ಲ!

ಅರಕೆರೆ ಪಿ. ಸುರೇಶ್, ಭದ್ರಾವತಿ
*ಒಂಟಿ ಹೃದಯವನ್ನು ಜಂಟಿ ಹೃದಯವಾಗಿಸಲು ಬೆಸುಗೆ ಮಾಡುವುದು ಹೇಗೆ?*



ಲಗ್ನವೇ; ಜೀವನದ ಅತ್ಯುತ್ತಮ ವೆಲ್ಡಿಂಗ್ ಎಂದರೆ ವೆಡ್ಡಿಂಗೇ!

ರಮೇಶ್, ಹನುಮನಾಳು
*ಆಗ 'ನೆನಪಿರಲ್ಲ' ಎಂದವಳು ಈಗ 'ನೆನಪಿದೆಯಾ?' ಎಂದು ಕೇಳುತ್ತಾಳಲ್ಲಾ...?*
ತಿಳಿಯಿತು. ಆಗ ಬಹಳವೇ ಅಯೋಗ್ಯರಾಗಿದ್ದಿರಿ. ಈಗ ಎಲ್ಲರೂ ಮೆಚ್ಚುವ ಮಟ್ಟಕ್ಕೆ ಬೆಳೆದಿದ್ದೀರಿ.

ಆರಿಫ್, ದಾವಣಗೆರೆ
*ತಾಯಿಯೇ ಮೊದಲ ಗುರು; ಓಕೆ. ಆದರೆ ಪ್ರೀತಿಗೆ?*
ಅದಕ್ಕೂ ಆಕೆಯೇ; ನಿಮ್ಮಪ್ಪನಂತಹವರಿಗೇ ಪ್ರೀತಿಸುವುದನ್ನು ಹೇಳಿಕೊಟ್ಟವಳು ಆಕೆ!

■ ರಾಮ್